	ಸಿವಿಲ್	ಕ್ರಿಮಿನಲ್
ಉಚ್ಚ ನ್ಯಾಯಾಲಯ	75,231	10,987
ಜಿಲ್ಲಾ ನ್ಯಾಯಾಲಯ	1,17,027	30,544
ಸಿವಿಲ್ ನ್ಯಾಯಾಲಯ (ಕಿ.ಏ.)	3,21,246	1,60,878
ಸಿವಿಲ್ ನ್ಯಾಯಾಲಯ (ಹಿ.ಏ.)	1,64,130	2,80,562

(ಜಿಲ್ಲಾವಾರು ಮಾಹಿತಿ ಸಧ್ಯಕ್ಕೆ ಲಭ್ಯವಿರುವುದಿಲ್ಲ. ಉಚ್ಚನ್ಯಾಯಾಲಯದಿಂದ ಪಡೆದು ಒದಗಿಸಲಾಗುವುದು).

ಆ) ಇಂತಹ ಪ್ರಕರಣಗಳನ್ನು ನಿರ್ವಹಿಸುವಲ್ಲಿ ನ್ಯಾಯಾಲಯಗಳು ನಿಗದಿತ ವಿಧಾನವನ್ನು ಪಾಲಿಸಬೇಕಾಗುತ್ತದೆ.

ಇ) ಆ ಕುರಿತಂತೆ ರಾಜ್ಯ ಸರ್ಕಾರ : ಉಚ್ಚನ್ಯಾಯಾಲಯ ಈ ಕೆಳಗಿನಂತೆ ಕ್ರಮಕೈಗೊಂಡಿರುತ್ತದೆ.

ಮೊಕದ್ದಮೆಗಳ ತ್ವರಿತ ವಿಲೇವಾರಿಗೆ ಏಳು ಜಿಲ್ಲೆಗಳಲ್ಲಿ ಪೈಲೆಟ್ ಪ್ರಾಜೆಕ್ಟ್ ಯೋಜನೆ ಜಾರಿಗೆ ತರಲಾಗಿದೆ.

ಹಳೆಯ ಪ್ರಕರಣಗಳ ವಿಲೇವಾರಿಗೆ 93 ಶೀಘ್ರಗತಿ ನ್ಯಾಯಾಲಯಗಳನ್ನು ಸೃಜಿಸಲಾಗಿದೆ.

ಅಧೀನ ನ್ಯಾಯಾಲಯಗಳಲ್ಲಿ ಗಣಕೀಕರಣ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ.

ಹಳೆಯ ಪ್ರಕರಣಗಳನ್ನು ಆಧ್ಯತೆ ಮೇಲೆ ವಿಲೇವಾರಿ ಮಾಡುವಂತೆ ಎಲ್ಲಾ ನ್ಯಾಯಲಯಗಳಿಗೆ ಸೂಚಿಸಲಾಗಿದೆ.

ಸಣ್ಣ ಪ್ರಮಾಣದ ಅಪರಾಧಿಗಳಲ್ಲಿ ನ್ಯಾಯಾಂಗ ಬಂಧನಕ್ಕೆ ಒಳಗಾದ ಅಪರಾಧಿಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ತುರ್ತಾಗಿ ವಿಲೇವಾರಿಗೊಳಿಸುವಂತೆ ಎಲ್ಲಾ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳಿಗೆ ಸೂಚಿಸಲಾಗಿದೆ.

ಹಿರಿಯ ನಾಗರೀಕರಿಗೆ ಸಂಬಂಧಿಸಿದ ಪ್ರಕರಣಗಳನ್ನು ಆಧ್ಯತೆ ಮೇಲೆ ವಿಲೇವಾರಿಗೊಳಿಸುವಂತೆ ಎಲ್ಲಾ ನ್ಯಾಯಾಲಯಗಳಿಗೆ ಸೂಚಿಸಲಾಗಿದೆ.

ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು:ಆಡಳಿತಾತ್ಮಕ ನ್ಯಾಯಾಧೀಶರು ನ್ಯಾಯಾಲದ ಅಧಿಕಾರಿಗಳ ಸಭೆ ನಡೆಸುವ ಮುಖಾಂತರ ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದರತ್ತ ಹೆಚ್ಚಿನ ಗಮನ ಹರಿಸಿರುತ್ತಾರೆ.

5715, (5818) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು. (ಶಿವಾಜಿ ನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ಕಸ ತ್ಯಾಜ್ಯ ಪ್ರಮಾಣ ಎಷ್ಟು;

ಆ) ಇದನ್ನು ಸಂಗ್ರಹಿಸಲು (ಎಲ್ಲಾ ವಾರ್ಡ್‌ಗಳಲ್ಲಿ) ಯಾವ ವ್ಯವಸ್ಥೆ ಮಾಡಲಾಗಿದೆ ಹಾಗೂ ಇಂತಹ ಕಸವನ್ನು ಎಲ್ಲಿಗೆ ಕಳುಹಿಸಿಕೊಡಲಾಗುತ್ತಿದೆ;

ಇ) ಈ ತ್ಯಾಜ್ಯ ವಸ್ತು ನಿರ್ವಹಣೆಗೆ ಅನುಸರಿಸುವ ಮಾದರಿ ಮಾನದಂಡ ಗಳೇನು;

ಈ) ಆ ಪೈಕಿ ಸಾಫ್ಟ್‌ವೇರ್ ಸಂಸ್ಥೆ ಇತ್ಯಾದಿಗಳಿಂದ ಬರುವ ನಿರುಪಯುಕ್ತ ವಸ್ತುಗಳ ಸಂಗ್ರಹದ ಪ್ರಮಾಣ ಎಷ್ಟು ಹಾಗೂ ಇದನ್ನು ಈಗ ಎಲ್ಲಿ ಸಂಗ್ರಹಿಸಲಾಗಿದೆ?

ಉ) ತ್ಯಾಜ್ಯ ಸಂಸ್ಕರಣಾ ಕೇಂದ್ರ ಸ್ಥಾಪನೆಗೆ ಸರ್ಕಾರ ಉತ್ಸುಹಕವಾಗಿದೆಯೇ; ಹಾಗಿದ್ದಲ್ಲಿ ಮತ್ತು ಯಾವಾಗ ಕಾರ್ಯಾರಂಭ ಮಾಡಲಾಗುತ್ತಿದೆ. (ವಿವರ ಒದಗಿಸುವುದು);

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯ ಮಂತ್ರಿಗಳು

ಅ) ಪ್ರತಿದಿನ 2000 ಟನ್ ಕಸ ಸಂಗ್ರಹವಾಗುವುದೆಂದು ಅಂದಾಜಿಸಲಾಗಿದೆ.

ಆ) ಪ್ರತಿದಿನ ರಸ್ತೆಗಳು, ಪಾದಚಾರಿ ರಸ್ತೆಗಳು, ವಾಣಿಜ್ಯ ಸಂಕೀರ್ಣಗಳು ಮತ್ತು ನಗರ ಪಾಲಿಕೆಯ ಪ್ರದೇಶಗಳಲ್ಲಿ ಕಸ ಗುಡಿಸಿ ಸಂಗ್ರಹವಾಗುವ ಕಸವನ್ನು ಮತ್ತು ಎಲ್ಲಾ ಮನೆ ಮತ್ತು ಅಂಗಡಿ ಮುಂಗಟ್ಟುಗಳಿಂದ ನೇರವಾಗಿ ಗಂಟೆಗಾಡಿಗಳ ಮೂಲಕ ಸಂಗ್ರಹಿಸುವ ಕಸವನ್ನು ಟಿಪ್ಪರ್‌ಗಳ ಮೂಲಕ ಕಸ ಸಂಗ್ರಹಣಾ ಸ್ಥಳಗಳಿಗೆ ಸಾಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ಸರ್ಕಾರ ಸ್ವಾಮ್ಯದ ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಸಂಸ್ಥೆಗೆ ಪ್ರತಿದಿನ 350 ರಿಂದ 400 ಮೆಟ್ರಿಕ್ ಟನ್‌ಗಳಷ್ಟು ಕಸವನ್ನು ಗೊಬ್ಬರವನ್ನಾಗಿ ಪರಿವರ್ತಿಸಲಾಗುತ್ತಿದೆ. ಉಳಿದ ಕಸವನ್ನು ಖಾಸಗಿ ಸ್ವಾಮ್ಯದ ಪ್ರದೇಶಗಳಲ್ಲಿ ಇ. ಎಂ. ದ್ರಾವಣ ಸಿಂಪರಣೆ ಮಾಡುವ ಮೂಲಕ ವಿಲೇವಾರಿ ಮಾಡಲಾಗುತ್ತಿದೆ.

ಇ) ಮಹಾನಗರ ಪಾಲಿಕೆಯ ಎಲ್ಲಾ ಸಾರ್ವಜನಿಕ ಪ್ರದೇಶಗಳನ್ನು ಸ್ವಚ್ಛವಾಗಿಡುವುದು ಮತ್ತು ಪರಿಸರಕ್ಕೆ ಹಾನಿಯಾಗದಂತೆ ವಿಲೇವಾರಿ ಮಾಡುವುದು. ವಾಣಿಜ್ಯ ಚಟುವಟಿಕೆ ಇರುವ ಪ್ರದೇಶಗಳನ್ನು ಗುರುತಿಸಿ ರಾತ್ರಿ ಪಾಳಿಯಲ್ಲಿ ಸ್ವಚ್ಛತೆ ಕಾರ್ಯ ನಿರ್ವಹಿಸುವುದು, ಅಸಹ್ಯಕರ ಕೇಂದ್ರಗಳನ್ನು (Nusance spot) ಹಾಗೂ ಕಸದ ಶೇಖರಣೆ ಸ್ಥಳಗಳನ್ನು ಕಡಿಮೆ ಮಾಡುವುದು.

ಈ) ಸಾಫ್ಟ್‌ವೇರ್ ಸಂಸ್ಥೆಗಳು ಬಹುತೇಕ ನಗರದ ಹೊರ ವಲಯದಲ್ಲಿವೆ. ಇವುಗಳ ತ್ಯಾಜ್ಯ ನಗರ ಪ್ರದೇಶದಲ್ಲಿ ಕಡಿಮೆ ಇದ್ದು, ತ್ಯಾಜ್ಯ ಪ್ರಮಾಣವನ್ನು ಇದುವರೆವಿಗೆ ಅಂದಾಜು ಮಾಡಿರುವುದಿಲ್ಲ. ಈಗ ಬರುತ್ತಿರುವ ತ್ಯಾಜ್ಯ ವಸ್ತುಗಳನ್ನು ಅಂದರೆ ಥರ್ಮಾಕೋಲ್, ಪೇಪರ್ ಮತ್ತು ಕಾರ್ಬನ್ ಶೀಟ್ ಇತ್ಯಾದಿಗಳನ್ನು ಮುನಿಸಿಪಲ್ ತ್ಯಾಜ್ಯ ವಸ್ತುಗಳ ಜೊತೆ ಸಂಗ್ರಹಿಸಲಾಗುತ್ತಿದೆ ಹಾಗೂ ವಿಲೇವಾರಿ ಮಾಡಲಾಗುತ್ತಿದೆ.

ಉ) ಮಹಾನಗರ ಪಾಲಿಕೆಯ 225 ಚ.ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿ ಪ್ರತಿದಿನ ಸರಾಸರಿ 2000 ಟನ್‌ಗಳಷ್ಟು ವಸ್ತುಗಳು ಉತ್ಪಾದನೆ ಯಾಗುತ್ತಿದ್ದು, ಭಾರತ ಸರ್ಕಾರದ ಪರಿಸರ ಇಲಾಖೆಯು ರೂಪಿಸಿರುವ ಎಂ.ಎಸ್.ಡಬ್ಲ್ಯೂ. ನಿಯಮಗಳು 2000 ದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ತ್ಯಾಜ್ಯವಸ್ತುಗಳ ನಿರ್ವಹಣೆಯನ್ನು ಮಾಡಬೇಕಾಗಿರುತ್ತದೆ. ಅದರಂತೆ.

1. ಪಾಲಿಕೆಯ ಖಾಸಗಿ ಸಹಭಾಗಿತ್ವದೊಂದಿಗೆ ತ್ಯಾಜ್ಯವಸ್ತುಗಳ ವಿಲೇವಾರಿಗಾಗಿ 1000 ಟನ್‌ಗಳಷ್ಟು ತ್ಯಾಜ್ಯವನ್ನು ಪ್ರತಿದಿನ ನಿರ್ವಹಿಸಲು ಮೆ/ ರಾಂಕಿ ಲಿಮಿಟೆಡ್, ಹೈದರಾಬಾದ್ ಸಂಸ್ಥೆಯೊಂದಿಗೆ ಸ್ಯಾನಿಟರಿ ಲ್ಯಾಂಡ್ ಫಿಲ್ ಸ್ಥಾಪಿಸಲು ಹಾಗೂ ಪ್ರತಿ ಟನ್ನಿಗೆ 198 ರೂ. ಗಳ ಟಿಪ್ಪಿಂಗ್ ಫಿಯನ್ನು ಅಂತಿಮವಾಗಿ ನೆಲದಲ್ಲಿ ಹೂಳಬಹುದಾದ ತ್ಯಾಜ್ಯ ವಸ್ತುಗಳಿಗೆ ಪಾವತಿಸಲು ಒಪ್ಪಂದವಾಗಿದ್ದು. ಅದಕ್ಕಾಗಿ ಸುವಾರು 100 ಎಕರೆಗಳ ಪ್ರದೇಶವನ್ನು ಮಾವಳ್ಳಿಪುರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಗುರುತಿಸಲಾಗಿದ್ದು. ಸದರಿ ಚಾಗವನ್ನು ಸಂಸ್ಥೆಗೆ ಹಸ್ತಾಂತರಿಸಲಾಗಿದ್ದು, ತ್ಯಾಜ್ಯ ವಸ್ತುಗಳನ್ನು ಹೂಳುವ ಪ್ರಕ್ರಿಯೆಯು 2005ರ ಡಿಸೆಂಬರ್ ಅಂತ್ಯದೊಳಗಾಗಿ ಘಟಕವು ಕಾರ್ಯವನ್ನು ಪ್ರಾರಂಭಿಸಲಿದೆ.

2. ಪಾಲಿಕೆಯು ಪ್ರಸ್ತುತ 400 ಟನ್‌ಗಳಷ್ಟು ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್, ಬೊಮ್ಮನಹಳ್ಳಿ, ಇಲ್ಲಿಗೆ ಸಾಗಿಸಲಾಗುತ್ತಿದ್ದು, ಕಾಂಪೋಸ್ಟ್ ಹಾಗೂ ವರ್ಮಿ (ಎರೆಹುಳು ಗೊಬ್ಬರ) ಕಾಂಪೋಸ್ಟ್ ಅನ್ನು ಪ್ರತಿದಿನ ಸಂಸ್ಕರಣೆಯ ನಂತರ ಉತ್ಪಾದಿಸಲಾಗುತ್ತಿದೆ. ಸದರಿ ಸಂಸ್ಥೆಯು ಕಳೆದ 27 ವರ್ಷಗಳಿಂದ ನಡೆಯುತ್ತಿದೆ.

3. ಪಾಲಿಕೆಯು ಪ್ರತಿ ದಿನ 1000 ಟನ್‌ಗಳಷ್ಟು ಪ್ರಮಾಣದ ತ್ಯಾಜ್ಯ ವಸ್ತುಗಳನ್ನು ಬಳಸಿ ತ್ಯಾಜ್ಯ ವಸ್ತುಗಳಿಂದ ಹರಳುಗಳನ್ನು ಉತ್ಪಾದಿಸಿ ವಿದ್ಯುತ್ ತಯಾರಿಸುವ ಪ್ರಸ್ತಾವನೆಯನ್ನು ಖಾಸಗಿ ಸಹಭಾಗಿತ್ವದೊಂದಿಗೆ ಟೆಂಡರ್ ಮೂಲಕ "ಬಿಒಟಿ: (ನಿರ್ಮಾಣ ನಿರ್ವಹಣೆ ಹಸ್ತಾಂತರ) ಆಧಾರದ ಮೇಲೆ ನಿರ್ವಹಿಸಲು ಪಾಲಿಕೆಯ ನಿರ್ಣಯವಾಗಿದ್ದು, ಪ್ರಸ್ತಾವನೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದಕ್ಕಾಗಿ 170 ಎಕರೆಗಳ ಪ್ರದೇಶವನ್ನು ಬೆಂಗಳೂರು ಪೂರ್ವ ತಾಲ್ಲೂಕಿನ ಕ್ಯಾಲಸನಹಳ್ಳಿಯಲ್ಲಿ ಗುರುತಿಸಲಾಗಿದೆ.

4. ಉಳಿದಂತೆ ದೂರಗಾಮಿ ದೃಷ್ಟಿಯಿಂದ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿರುವ ಅಂಶವನ್ನು ಗಮನದಲ್ಲಿರಿಸಿ, ನಗರದ ಹೊರವಲಯದ ವಿವಿಧ ಪ್ರದೇಶಗಳಲ್ಲಿ ಜಾಗವನ್ನು ಗುರುತಿಸಲು ಕ್ರಮವಹಿಸಲಾಗುತ್ತಿದ್ದು, ವೈಜ್ಞಾನಿಕ ವಿಲೇವಾರಿಗಾಗಿ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

5716, (5819) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, (ಶಿವಾಜಿ ನಗರ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು. ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು–ಹೊಸೂರು ನಡುವೆ ಪ್ರತಿದಿನ ಹೆಚ್ಚಿನ ಸಂಖ್ಯೆಯಲ್ಲಿ ಅನಧಿಕೃತ ಬಸ್‌ಗಳು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಸರ್ಕಾರಕ್ಕೆ ಆಗುತ್ತಿರುವ ಅಂದಾಜು ನಷ್ಟವೆಷ್ಟು;

ಇ) ಪರವಾನಗಿ ಇಲ್ಲದ ಅನಧಿಕೃತ ಬಸ್‌ಗಳ ಸಂಚಾರವನ್ನು ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಮಲ್ಲಿಕಾರ್ಜುನ ಖರ್ಗೆ, ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು.

ಅ) ಬಂದಿದೆ.

ಆ) ಸದರಿ ವಾಹನಗಳು ಕರ್ನಾಟಕಕ್ಕೆ ತೆರಿಗೆ ಪಾವತಿಸುತ್ತಿರುವುದರಿಂದ ನಷ್ಟವುಂಟಾಗುತ್ತಿಲ್ಲ.

ಇ) ಸಾರಿಗೆ ಇಲಾಖೆಯ ವತಿಯಿಂದ ವಿಶೇಷ ತಪಾಸಣಾ ಕಾರ್ಯವನ್ನು ಕೈಗೊಂಡಿದ್ದು, ವಾಹನಗಳನ್ನು ತಪಾಸಿಸಿ, ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ ದಂಡವನ್ನು ವಸೂಲಿ ಮಾಡಿ ವಾಹನಗಳ ಪರವಾನಿಗೆಯನ್ನು ಅಮಾನತ್ತು ಮಾಡಲಾಗುತ್ತಿದೆ.

5717, (5820) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, (ಶಿವಾಜಿ ನಗರ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು. ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ 20 ವರ್ಷ ಆಯಸ್ಸು ಕಳೆದಿರುವ ಸರಕು ಹಾಗೂ ಸಾಗಾಣಿಕೆ ವಾಹನಗಳ ಅಂದಾಜು ಸಂಖ್ಯೆ ಎಷ್ಟು;

ಆ) ಜನಸಂಖ್ಯೆ ಮತ್ತು ಪರಿಸರ ಮಾಲಿನ್ಯ ತಪ್ಪಿಸಲು ಈ ವಾಹನಗಳನ್ನು ನಿವೃತ್ತಿಗೊಳಿಸಲು ಸರ್ಕಾರ ನಿರ್ಧರಿಸಿದೆಯೇ;